INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -3, May--June, 2025
PageNo,44-48
Peer -Reviewed, Refereed Journal

# ಅಲ್ಲಮನ ವಚನಗಳಲ್ಲಿ ಮಾಯೆ–ನಿರ್ಮಾಯೆ

**ಆನಂದಕುಮಾರ್.ಎಂ.**[1]

ಬುದ್ಧನು 'ಆಸೆಯೆ ದುಃಖಕ್ಕೆ ಮೂಲ' ಎಂಬ ಮಾತನ್ನು ಸಾರ್ವಕಾಲಿಕವಾಗಿ ಉಳಿಸಿ ಹೋಗಿದ್ದಾನೆ. ಯಾವುದೇ ಆಸೆಗಳಿರಲಿ, ಆಸೆಯ ಜನ್ಮ ಸ್ಥಾನ ಮನಸೇ ಆಗಿರುವುದರಿಂದ, ಸರ್ವಕ್ಕೂ ಮೂಲ ಮನಸ್ಸೆ ನೇರ ಕಾರಣವಾಗಿದೆ. ಮನುಷ್ಯನನ್ನು ಮೆಟ್ಟಿ ತಿಂದು ಮುಕ್ಕುತ್ತಿರುವುದೂ ಇದೆ ಬಾಯಿ ಇಲ್ಲದ ಮನಸ್ಸು. ಈ ಮನಸ್ಸು ಎಂಬುದು ಒಬ್ಬ ಮನುಷ್ಯನನ್ನು ಏನೆಲ್ಲ ಮಾಡಬಹುದು ಅಷ್ಟನ್ನೂ ಮಾಡಲು ಮನಸ್ಸಿಗೆ ತಾಕತ್ತು ಇದೆ. ಅಂಗುಲಿಮಾಲ ರಾಕ್ಷಸನಾದದ್ದೂ, ರಾಕ್ಷಸತನವನ್ನು ಬಿಟ್ಟು ಮನುಷ್ಯನಾದದ್ದೂ ಇದೇ ಮನಸ್ಸಿನಿಂದ. ಈ ಸರ್ವಾಂತರ್ಯಾಮಿ ಮನಸ್ಸಿನ ನಿಯಂತ್ರಕ ನರಮಾನವನೇ ಆಗಬೇಕು ಎಂಬುದರಲ್ಲಿ ಸೋಜಿಗ ಇಲ್ಲವೇ ಇಲ್ಲ.

ಅಲ್ಲಮನು ಈ ಮನಸ್ಸಿನ ಸುತ್ತಾಟ ತಿರುಗಾಟ ಚೆಲ್ಲಾಟವನ್ನು ಮಾಯೆ ಎಂಬುದಾಗಿ ಕರೆದಿದ್ದಾನೆ. ಈ ಮಾಯೆ ಮನುಷ್ಯನನ್ನು ಒಂದು ಕಡೆಯಿಂದ ತಿಂದು ತಿಂದೂ ನಾಶ ಮಾಡುತ್ತಿದೆ. ಮನುಷ್ಯನು ಮನುಷ್ಯನಾಗಿ ಇರುವುದಕ್ಕೆ ಬಿಡದ ಮಾಯೆಯೂ ಮನಷ್ಯನನ್ನು ನಿದ್ರೆಯಲ್ಲೂ ಕಾಡಿ ಕಂಗೆಡಿಸಿಬಿಡುತ್ತದೆ. ಈ ಮಾಯೆಯನ್ನು ಗೆದ್ದವನೇ ನಿಜವಾದ ಜ್ಞಾನವಂತನಾಗುತ್ತಾನೆ. ಇಂತ ಮನುಷ್ಯನ ಎದೆ ಒಳಗೆ ಸರ್ವವನ್ನೂ ಕಂಡು ಉಣ್ಣಬಹುದು. ಇದಕ್ಕಿಂತ ದೊಡ್ಡ ಮೋಕ್ಷ, ಸಾರ್ಥಕ ಬದುಕು ಬೇರೆ ಏನಿಲ್ಲ. ಮನುಷ್ಯನ ಅಂತಿಮ ಗುರಿ ಜ್ಞಾನವೇ ಎಂದು, ಈ ಜ್ಞಾನದಿಂದ ನಮ್ಮನ್ನು ನಾವು ತಿಳಿದುಕೊಂಡು ಸಾರ್ಥಕಗೊಳಿಸಿಕೊಳ್ಳಬೇಕಿದೆ ಎಂದು ಅಲ್ಲಮನು ಸಾರಿದ್ದಾನೆ.

ರಕ್ಕಸಿಗಿಬ್ಬರು ಮಕ್ಕಳು, ತೊಟ್ಟಿಲ ಮೇಲೈವರು,
ರಕ್ಕಸಿ ಬಾಣತಿಯಾದಡೆ ಮಕ್ಕಳಿಗಿನ್ನೆಂತೊ!
ತೊಟ್ಟಿಲ್ಲ ತೂಗುವೆ ಜೋಗುಳವಾಡುವೆ
ರಕ್ಕಸಿ ಬಾಣತಿಯ ತೊಟ್ಟಿಲು ನುಂಗಿತ್ತು– ಇದೇನು ಹೇಳಾ ಗುಹೇಶ್ವರಾ?"[1]

ರಕ್ಕಸಿ ಅಂದರೆ ದೇಹ, ಇಬ್ಬರು ಮಕ್ಕಳು ಅಂದರೆ ಪ್ರಾಣ ಮತ್ತು ಜೀವ. ತೊಟ್ಟಿಲ ಮೇಲೈವರು ಅಂದರೆ ದೇಹವೆಂಬ ತೊಟ್ಟಿಲ ಮೇಲೆ ಪಂಚೇಂದ್ರಿಗಳು ಇದ್ದಾರೆ. ರಕ್ಕಸಿಯಾದ ದೇಹವು ಎಲ್ಲಾ

1. **ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು.**

ಕೆಡುಕುಗಳನ್ನು ತುಂಬಿಕೊಂಡ ಬಾಣತಿಯಾದರೇ ಕೆಡಕುಗಳಿಗೆ ಜನ್ಮ ನೀಡುತ್ತಾಳೆ. ಆದರೂ ಮಕ್ಕಳಾದ ಪ್ರಾಣ ಮತ್ತು ಜೀವ ಇಬ್ಬರೂ ಸೇರಿಕೊಂಡು ತೊಟ್ಟಿಲ ತೂಗಿ ಜೋಗುಳವಾಡಿದರೇ ಕೆಟ್ಟತನಗಳು ಖುಷಿಗೊಂಡು ಉಲ್ಬಣಗೊಂಡಾಗ, ಸಾವು ಎಂಬುದು ತೊಟ್ಟಿಲನ್ನೆ ನುಂಗಿ ಬಿಡುತ್ತದೆ. ಅಂದರೆ ಸಾವು ತಿಂದುಕೊಳ್ಳುತ್ತದೆ. ಈ ವಚನದಲ್ಲಿ ಸಾವನ್ನು ಕೇಂದ್ರಿಕರಿಸಿ ಮಾತನಾಡಿದ್ದರೂ ಮಾಯೆ ಎಂಬುದು ಸಾವಿಗೆ ಕಾರಣವಾಗಿದೆ ಎಂಬುದನ್ನು ಮರೆಯಬಾರದು. ದೇಹದ ತೊಟ್ಟಿಲಲ್ಲಿ ಕೂತಿರುವ ಪಂಚೇಂದ್ರಿಗಳು ರಕ್ಕಸಿಯಾಗಲು ಕಾರಣರ್ತರಾಗಿದ್ದಾರೆ. ಪಂಚೇಂದ್ರಿಯಗಳ ಸಮತೋಲನ ಮಾಡದೇ ಹೋದರೆ ಸಾವು ಕಟ್ಟಿಟ್ಟ ಬುತ್ತಿಯಾಗುತ್ತದೆ. ಈ ಇಲ್ಲಿ ಅಲ್ಲಮನು ಪಂಚೇಂದ್ರೀಯಗಳನ್ನೆ ಮಾಯೆ ಎಂದು ಕರೆದಿದ್ದಾನೆ. ಎಲ್ಲಾ ಪಂಚೇಂದ್ರಿಗಳನ್ನು ಜ್ಞಾನೇಂದ್ರಿಯಗಳನ್ನಾಗಿ ಮಾಡಿಕೊಳ್ಳದ ಹೊರತು. ಮಾಯೆ ಎಂಬುದು ಯಾರನ್ನೂ ಬಿಡುವುದಿಲ್ಲ. ಉದಾಹರಣೆಗೆ– "ಗಗನದ ಮೇಲೊಂದು ಅಭಿನವ ಗಿಳಿ ಹುಟ್ಟಿ, ಸಯ ಸಂಭ್ರಮದಲ್ಲೊ ಮನೆಯ ಮಾಡಿತ್ತು, ಬ್ರಹ್ಮನಾ ಗಿಳಿಗೆ ಹಂಜರವಾದ, ವಿಷ್ಣು ಆ ಗಿಳಿಗೆ ಕೊರೆವ ಕೂಳಾದ, ರುದ್ರನಾ ಗಿಳಿಗೆ ತಾ ಕೋಳಾದ (ಕೋಳುವ್ಹೋದ ?), ಇಂತೀ ಮೂವರ ಮುಂದಣ ಕಂದನ ನುಂಗಿ, ದೃಷ್ಟನಾಮ ನಷ್ಟವಾಯಿತ್ತು– ಇದೆಂತೊ ಗುಹೇಶ್ವರಾ?"[2]

ಗಗನ ಎಂದರೆ ಉಸಿರಾಡುವ ಖಾಲಿ ದೇಹ. ಇಂತಹ ಖಾಲಿ ದೇಹದ ಮೇಲೆ ಮಾಯೆ ಎಂಬ ಗಿಳಿ ಹುಟ್ಟಿಕೊಳ್ಳುತ್ತದೆ. ಮಾಯೆ ಎಂಬುದನ್ನು ಸಯ ಮಾಡಿಕೊಂಡ ದೇಹ ಭಾರೀ ಸಂಭಮದಲ್ಲಿತ್ತು. ಸೃಷ್ಟಿಕರ್ತ ಎಂಬುವ ಬ್ರಹ್ಮನಂತಹ ಮನಸ್ಸಿಗೆ ಆ ಮಾಯೆ ಬಂದು ಆವರಿಸಿಕೊಂಡಿತು. ಅವತಾರ ಪುರುಷ ಎಂಬುವ ವಿಷ್ಣುವಿನ ದೇಹಕ್ಕೆ ಆ ಮಾಯೆ ಎಂಬ ಗಿಳಿ ನುಗ್ಗಿ, ಆ ಗಿಳಿಗೆ ಕೊರೆವ ಅನ್ನವಾದ. ಇಲ್ಲಿ ಅನ್ನ ಎಂಬುದನ್ನು ತಿನ್ನಲು ಆಗುತ್ತಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಬೇಕಿದೆ. ಇದೇ ರುದ್ರ ಎಂಬುವವನೂ ಕೂಡ ತನ್ನ ಮನಸ್ಸನ್ನು ಮಾಯೆ ಎಂಬ ಗಿಳಿಗೆ ಕೊಟ್ಟು ಕೋಳಹಾಕಿಕೊಂಡ. ಈ ಮೂವರ ಮುಂದಿನ ಭವಿಷ್ಯವನ್ನು ಆ ಮಾಯೆಯೂ, ಈ ಮೂವರ ಹುಟ್ಟಿನ ಮೂಲವನ್ನೇ ತಿಂದು ಭವಿಷ್ಯ ಕತ್ತಲು ಮಾಡಿಬಿಟ್ಟಿದೆ ಮಾಯೆ. ದೇವರು ಎಂದು ಕರೆಸಿಕೊಳ್ಳುವವರೆ ಮಾಯೆಯ ಬಲೆಗೆ ಬಿದ್ದು ನರಳುವಾಗ ಇನ್ನು ದೇವರಿಗೆ ಅರ್ಥವೆಲ್ಲಿ? ದೇವರೆಂಬುವ ದೃಷ್ಟನಾಮ ಸರ್ವನಾಶವಾಯಿತು. ಮಾಯೆ ಸರ್ವನಾಶಮಾಡಿಬಿಟ್ಟುತ್ತು. ಮಾಯೆ ಎಂಬುದು ದೇವರನ್ನೂ ಬಿಟ್ಟಿಲ್ಲ ಎಂದ ಪುರಾತನ ಸತ್ಯವನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ. "ಬ್ರಹ್ಮಪಾಶ, ವಿಷ್ಣು ಮಾಯೆ ಎಂಬ ಬಲೆಯ ಬೀಸಿ, ಹೊನ್ನು ಹೆಣ್ಣು ತೋರಿ, ಮುಕ್ಕಣ್ಣ ನಾಡಿದ ಬೇಂಟೆಯ. ಆಸೆಯೆಂಬ ಕುಟುಕನಕ್ಕಿ, ಹೇಸದೆ ಕೊಂದೆಯಲ್ಲಾ ಗುಹೇಶ್ವರಾ."[3]

ಈ ವಚನ ಕುರಿತು ಎಲ್.ಬಸವರಾಜು ಅವರು "ಅಲ್ಲಮಪ್ರಭು ದೇವರು ಶಾಪದಿಂದ ಜನ್ಮವೆತ್ತಿದರೆಂಬ ಪುರಾಣ ಸುಳ್ಳಿನ ಕಂತೆ ಅವರು ಯಾವ ಅಶೆಗೂ ಆಮಿಷಕ್ಕೂ ಬಲೆ ಬೀಳದೆ ಬಾಳಿ ಬದುಕಿ ಬಯಲಾದರು. ಜೀವರು ಹುಟ್ಟಿದರೆಂದರೆ ಬ್ರಹ್ಮಪಾಶ ಬದ್ಧರಾದಂತೆಯೇ. ಹೀಗೆ ಹುಟ್ಟಿದವರು

ಬದುಕಲು ಪಡುವ ರಭಸಮತಿಯ ತಹತಹವೇ ವಿಷ್ಣು ಮಾಯೆ– ಈ ಮಾಯಾಜಾಲವನ್ನು ಚೆಲ್ಲಿ ಲಾಲಾಸೀ ಜೀವರನ್ನು ಬೇಟೆಯಾಡುತ್ತಾನೆ.– ಎನ್ನುತ್ತ, ಕುಟುಕಿನ ಅಶೆ ತೋರಿ ಜೀವ ಪಕ್ಷಿಗಳನ್ನು ಬೇಟೆಯಾಡಿ ಕೊಲ್ಲುವ ಶಿವ ರೌದ್ರವನ್ನು ಕರುಣಾದ್ರವಾಗಿ ಆಕ್ಷೇಪಿಸುತ್ತಿದ್ದಾನೆ ಅಲ್ಲಮಪ್ರಭುದೇವ" ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ."[4]

ಬ್ರಹ್ಮಪಾಶ ವೆಂದರೆ ತಾಯಿ ಗರ್ಭದಲ್ಲಿ ಹೋಗಿ ಸೇರಿಕೊಳ್ಳುವ ವೀರ್ಯವೇ ಮಾಯೆಯಾಗಿ ಸೇರಿಕೊಳ್ಳುತ್ತದೆ. ಇದನ್ನು ಯಾರು ಕಾಣುತ್ತಾರೆ? ಎಂದು ಅಲ್ಲಮ ಕೇಳುತ್ತಿದ್ದಾನೆ. ಗರ್ಭದಲ್ಲಿ ಮಗು ಬೆಳೆದು ಭೂಮಿಗೆ ಬಿದ್ದಾಗ ಅದಕ್ಕೆ ಲೆಕ್ಕವಿಲ್ಲದಷ್ಟು ಮಾಯೆಯೂ ಕ್ಷಣ ಕ್ಷಣಕ್ಕೂ ಆವರಿಸಿಕೊಳ್ಳುತ್ತಿರುತ್ತಾಳೆ. ಇದೇ ವಿಷ್ಣ ಮಾಯೆ ಎಂಬುದಾಗಿದೆ. ಮುಕ್ಕಣನೆಂದರೆ– ಎರಡು ಕಣ್ಣುಗಳನ್ನು ಬಿಟ್ಟು ಮೂರನೇ ಕಣ್ಣೂ ಒಂದಿದೆ. ಅದು ಒಳಗಣ್ಣು, ಅಂತರಂಗದ ಕಣ್ಣು. ಸರಿ, ತಪ್ಪುಗಳನ್ನು ತೂಕ ಮಾಡುವ ಕಣ್ಣು. ಇಂತಹ ಅಂತರಂಗದ ಜೀವನಾಡಿ ಕಣ್ಣುಗಳು ಹೆಣ್ಣು, ಹೊನ್ನು ಎಂಬ ಮಾಯೆಗೆ ಸಿಕ್ಕಿಕೊಂಡು ಆಸೆ ಎಂಬ ವಿಷವನ್ನು ಕುಡಿದು ನರಳುವ ಸ್ಥಿತಿಗೆ ಬಂದು ತಲುಪುತ್ತದೆ. ಈ ನರಳುವಿಕೆ ದೇಹವನ್ನು ಕೊನೆಗೆ ಗುಹೇಶ್ವರನೇ ನೀ ಬದುಕುವುದು ಬದಕಲ್ಲ ಎಂದು ಕೊಲ್ಲುತ್ತಾನೆ. ಈ ಗುಹೇಶ್ವರನು ಕೊಲ್ಲುವಿಕೆ ಎಂಬುದು ನಮಗೆ ಆಶ್ಚರ್ಯವನ್ನುಂಟು ಮಾಡಬಹುದು. ಆದರೆ ಗುಹೇಶ್ವರ ಎಂಬುದು ಜನನವೂ ಹೌದು, ಮರಣವೂ ಹೌದು. ಮರಣದಲ್ಲಿಯೂ ಒಂದು ತತ್ವ ಇದೆ ಎಂಬುದನ್ನು ಕಾಣಬೇಕಿದೆ. ಇದನ್ನು ಸೂಕ್ಷ್ಮವಾಗಿ ಅರ್ಥೈಸಿಕೊಳ್ಳಬೇಕಿದೆ. ಮಾಯೆ ಎನ್ನುವುದು ಯಾರನ್ನು ಬಿಟ್ಟಿದೆ? ಅಜ್ಞಾನ ತುಂಬಿಕೊಂಡು ಅದೇ ಜ್ಞಾನವೆಂದು ಬೀಗುವ ಯಾರನ್ನೂ ಮಾಯೆ ಬಿಟ್ಟಿಲ್ಲ.

"ಬ್ರಹ್ಮ ಘನವೆಂದಡೆ ಬ್ರಹ್ಮನ ನುಂಗಿತ್ತು ಮಾಯೆ,<br>
ವಿಷ್ಣು ಘನವೆಂದಡೆ ವಿಷ್ಣುವ ನುಂಗಿತ್ತು ಮಾಯೆ,<br>
ರುದ್ರ ಘನವೆಂದಡೆ ರುದ್ರನ ನುಂಗಿತ್ತು ಮಾಯೆ<br>
ಸರ್ವವೂ ನಿನ್ನ ಮಾಯೆ !

ಒಬ್ಬರನ್ನೊಳಕೊಂಡಿತ್ತೆ ಹೇಳಾ ಗುಹೇಶ್ವರಾ?"[5] ಎಂದು ಅಳವಾಗಿ ಕೇಳುತ್ತಿದ್ದಾನೆ. ಯಾಕೆಂದರೆ, ಜನರು ಬ್ರಹ್ಮ, ವಿಷ್ಣು ರುದ್ರರೇ ಮಾನವರ ಆರಾಧಕರಾಗಿದ್ದಾರೆ. ಮಾಯೆ ತುಂಬಿಕೊಂಡಿರುವ ಖ್ಯಾತರನ್ನು ಹಿಂಭಾಲಿಸುವವರೂ ಮಾಯೆಯನ್ನೇ ತುಂಬಿಕೊಳ್ಳುತ್ತಾರೆ. ಅಲ್ಲಮನ ಕಣ್ಣಿಗೆ ಮನುಷ್ಯ ಲೋಕವೆಲ್ಲವೂ ಮಾಯೆಯನ್ನು ತುಂಬಿಕೊಂಡು ಅರೆ ಹುಚ್ಚರಾಗಿಯೂ, ಪೂರ್ಣ ಹುಚ್ಚರಾಗಿಯೂ ಕುಣಿದು ಕುಪ್ಪಳಿಸುತ್ತಿರುವ ಬೊಂಬೆಗಳಾಗಿ ಕಾಣುತ್ತಿದ್ದಾರೆ. ಹಾಗಾಗಿ– 'ಒಬ್ಬರನ್ನೊಳಕೊಂಡಿತ್ತೆ ಹೇಳಾ ಗುಹೇಶ್ವರಾ?' ಎಂದು ಪ್ರಬಲವಾಗಿ ಕೇಳುತ್ತಿದ್ದಾನೆ. ಈ ಮುಂದಿನ ವಚನವು ಹಿಂದಿನ ವಚನಕ್ಕೆ ಪೂರಕವಾಗಿದ್ದು, ಈ ವಚನವನ್ನು ಗಮನಿಸಿ–

"ದೇವರೆಲ್ಲರ ಹೊಡೆತಂದು ದೇವಿಯರೊಳಗಗೆ ಕೂಡಿತ್ತು ಮಾಯೆ,

ಹರಹರಾ ಮಾಯೆ ಇದ್ದೆಡೆಯ ನೋಡಾ.

ಶಿವಶಿವಾ ಮಾಯೆ ಇದ್ದೆಡೆಯ ನೋಡಾ.

ಎರಡೆಂಬತ್ತು ಕೊಟಿ ಪ್ರಮಥಗಣಂಗಳು, ಅಂಗಾಲ ಕಣ್ಣವರು

ಮೈಯೆಲ್ಲಾ ಕಣ್ಣವರು, ನಂದಿ ವಾಹನ ರುದ್ರರು– ಇವರೆಲ್ಲರು

ಮಾಯೆಯ ಕಾಳಗಾಹಿನ ಸರಮಾಲೆ ಕಾಣಾ ಗುಹೇಶ್ವರಾ."[6] ಎಂದು ಸಾರಿದ್ದಾನೆ.

ಮತ್ತೆ ಒಂದೇ ಒಂದು ಮಾತಲ್ಲಿ ಕೇಳಬೇಕು ಅಂದರೆ ಮಾಯೆ ಯಾರನ್ನು ಬಿಟ್ಟಿದೆ? ವಾಖ್ಯಾನಕಾರ ಮಹಾಲಿಂಗ ಅವರು ಈ ವಚನ ಕುರಿತು– "ಅನಂತಕೊಟಿ ರುದ್ರಾದಿಗಳೆಲ್ಲರೂ ತಾವು ನಿತ್ಯ ಪರಿಪಪೂರ್ಣವಾದ ಮಹಾಘನ ಪರಶಿವತತ್ವ ಸ್ವರೂಪರೆಂದರಿಯದೆ ಕೈಲಾಸವೆಂಬ ಪ್ರಾದೇಶಿಕಪುರದಲ್ಲಿ ಆಶ್ರೀತತರಾಗಿ ಇದ್ದು – ಅಲ್ಲಿಯ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯವೆಂಬ ಅಲ್ಪ ಪದವಿಗಳಿಗೆ ಎರಗಿ ಮೆಚ್ಚಿ ಮರುಳಾಗಿರುವರಾಗಿ ಇವರೆಲ್ಲರೂ ಮಾಯಾಸಕ್ತರು."[7] ಎಂದು ಅಭಿಪ್ರಾಯ ಪಟ್ಟಿದ್ದಾರೆ. ನರಮನುಷ್ಯ ತನ್ನನ್ನು ತಾನು ಕಂಡು ಕೊಳ್ಳದೆ ಹೊರತು ಬದುಕ ಬದುಕಾಗಿರದೇ ಮಾಯೆ ಪಾಲಾಗಿ ಕೊನೆ ಹಾಡಬೇಕಾಗುತ್ತದೆ. ಇಲ್ಲಿ ತನ್ನನ್ನು ತಾನು ತಿಳಿದುಕೊಂಡು ಬಾಳುವುದೇ ಗುಹೇಶ್ವರ ಪ್ರಜ್ಞೆಯಾಗಿದೆ. ಈ ಪ್ರಜ್ಞೆಯನ್ನು ತಲುಪಲು ಯೋಗಸ್ಥಿತಿಯಲ್ಲಿ ನಿತ್ಯ ಧ್ಯಾನಸ್ಥಿತಿಗೆ ತಲುಪಬೇಕಾಗಿದೆ. ಶ್ರೀ ಸಿದ್ದೇಶ್ವರ ಸ್ವಾಮೀಜಿಗಳು ಈ ವಚನ ಕುರಿತು ಚರ್ಚಿಸುತ್ತ "ಮಾಯೆ ಸರ್ವಸಮರ್ಥ. ಅದು ಇಲ್ಲದ ಸ್ಥಾನವಿಲ್ಲ. ಅದು ಮಾಡದ ಕಾರ್ಯವಿಲ್ಲ. ದೇವ ದೇವರೆಲ್ಲರನ್ನು ಅಟ್ಟಿಸಿ ತಂದು ದೇವಿಯರೊಳು ಕೂಡಿಸುತ್ತದೆ. ಕೋಟ್ಯಂತರ ಪ್ರಥಮಗಣಂಗಳು, ಅಂಗಾಲ ಕಣ್ಣವರು, ಮೈಯೆಲ್ಲ ಕಣ್ಣವರು, ನಂದಿ ವಾಹನ ರುದ್ರರು ಅದರ ಪರಿಚಾರಕರು, ಸಾಲುಗಟ್ಟಿದ ಪಾದ ಸೇವಕರು. ಆ ಮಾಯೆಯ ವಿಲಾಸ ವೈಚಿತ್ರವನ್ನು ಕಲ್ಪಿಸಲೂ ಆಗದು"[8] ಎಂದು ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ಪ್ರಜ್ಞೆಯನ್ನು ನಮ್ಮದಾಗಿಸಿಕೊಂಡು ಗುಹೇಶ್ವರ ಪ್ರಜ್ಞೆಯನ್ನು ಅರ್ಥಮಾಡಿಕೊಳ್ಳಬೇಕಿದೆ. ಪ್ರಜ್ಞೆ ಎಂಬುದು ಪ್ರತಿ ಕ್ಷಣ ಹುಟ್ಟೀ, ಪ್ರತೀ ಕ್ಷಣ ಸಾಯುವ ಸ್ಥಿತಿಯಾಗಿದೆ. ಯಾವ ವ್ಯಕ್ತಿ ಪ್ರಜ್ಞೆ ಹುಟ್ಟಿದ ಆ ಕ್ಷಣವೇ ಆ ಪ್ರಜ್ಞೆಯನ್ನು ತನ್ನ ಜ್ಞಾನವಾಗಿಸಿಕೊಳ್ಳುತ್ತಾನೋ ಅವನೇ ಮಾಯೆ ಗೆದ್ದು ನಿರ್ಮಾಯ ಗೊಳ್ಳುತ್ತಾನೆ. ಈ ವ್ಯಕ್ತಿತ್ವವನ್ನು ಅಲ್ಲಮನು ಜ್ಞಾನ, ನಿರ್ಮಾಯೆ ಎಂದು ಒಪ್ಪಿಕೊಳ್ಳುತ್ತಾನೆ.

**ಕೊನೆ ಟಿಪ್ಪಣಿಗಳು**

1. ಅಲ್ಲಮಪ್ರಭುದೇವರ ವಚನ ಸಂಪುಟ, ಬಿ.ವಿ.ಮಲ್ಲಾಪುರ, ಪು, ಸಂಖ್ಯೆ, – 7
2. ಅದೇ. ಪು, ಸಂಖ್ಯೆ,–7
3. ಅದೇ. ಪು, ಸಂಖ್ಯೆ,–8
4. ಪ್ರಭುದೇವರ ಷಟ್ಸ್ಥಲದ ವಚನಗಳು, ಎಲ್.ಬಸವರಾಜು. ಪು. ಸಂಖ್ಯೆ–40
5. ಅಲ್ಲಮಪ್ರಭುದೇವರ ವಚನ ಸಂಪುಟ, ಬಿ.ವಿ.ಮಲ್ಲಾಪುರ, ಪು. ಸಂಖ್ಯೆ, – 9
6. ಅದೇ. ಪು, ಸಂಖ್ಯೆ,–9
7. ಪ್ರಭುದೇವರ ಷಟ್ಸ್ಥಲದ ವವನಗಳು, ಎಲ್.ಬಸವರಾಜು. ಪು. ಸಂಖ್ಯೆ 41,42
8. ಅಲ್ಲಮ ಪ್ರಭುದೇವರ ವಚನ–ನಿರ್ವಚನ, ಶ್ರೀ ಸಿದ್ದೇಶ್ವರ ಸ್ವಾಮಿಗಳು, ಪು. ಸಂಖ್ಯೆ–36

**ಪರಾಮರ್ಶನ ಗ್ರಂಥಗಳು**

1. ಬಸವರಾಜು. ಎಲ್, ಪ್ರಭುದೇವರ ಷಟ್ಸ್ಥಲದ ವಚನಗಳು, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ಮೈಸೂರು–2005
2. ಮಲ್ಲಾಪುರ.ಬಿ.ವಿ, ಅಲ್ಲಮಪ್ರಭುದೇವರ ವಚನ ಸಂಪುಟ– ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ ಬೆಂಗಳೂರು–2001
3. ಶ್ರೀ ಸಿದ್ದೇಶ್ವರ ಸ್ವಾಮಿಗಳು, ಅಲ್ಲಮ ಪ್ರಭುದೇವರ ವಚನ–ನಿರ್ವಚನ, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ಮೈಸೂರು–2017